ದಿನಾಂಕ 24-01-2025 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಬಿ.ಹೆಚ್ ವಕೀಲರಿಂದ**

1) ನನ್ನ ಗಾಡಿ ಸುಟ್ಟ ಬಗ್ಗೆ ಇನ್ಸುರೆನ್ಸ ಹಣ ನನಗೆ ಸಿಗುತ್ತದೆ ಎಂದು ಆರ್ ಟಿ ಓ ಕಚೇರಿಯಲ್ಲಿ ಮೊದಲು ಯಾವಾಗ ವಿಚಾರಣೆ ಮಾಡಿದ್ದೆ ಎಂದರೆ, ಅದು 02-03-2019 ರಂದು. ಕಾರಿನ ಇನ್ಸುರೆನ್ಸ ಹಣಕ್ಕಾಗಿ ಆರ್ ಟಿಓ ಕಚೇರಿಗೆ ನಾನು ಒಟ್ಟಿಗೆ 3 ಬಾರಿ ಹೋಗಿದ್ದೆ. ನಾನು 1 ನೇ ಆರೋಪಿತನನ್ನು ಮೊದಲ ಬಾರಿಗೆ ಭೇಟಿಯಾಗಿದ್ದು 15-03-2019 ರಂದು. ನಾನು ಆಗ ಅವರ ಕೋಣೆಗೆ ಎರಡು ಬಾರಿ ಹೋಗಿದೆ. ಅದು ಬೆಳಗ್ಗಿನ 10 ರಿಂದ 11 ಗಂಟೆಯ ಸಮಯದಲ್ಲಿ. 16 ನೇ ತಾರೀಕಿಗೆ ಆರ್ ಟಿ ಓ ಕಚೇರಿಯಿಂದ ನನಗೆ ಫೋನ್ ಕರೆ ಬಂದಿಲ್ಲ ಮತ್ತು ನನ್ನ ಕೆಲಸವಾಗಿದೆ ಎಂದು ಆ ಫೋನ್ ಕರೆಯ ಮೂಲಕ ನನಗೆ ತಿಳಿದಿಲ್ಲ. ನಾನು 15 ನೇ ತಾರೀಕಿನಂದು ಎಸಿಬಿ ಅಧಿಕಾರಿಗಳೊಂದಿಗೆ ಮಾತನಾಡಿಲ್ಲ. ನಾನು 15 ನೇ ತಾರೀಕಿನಂದು 2 ಗಂಟೆಯ ಒಳಗೆ ಆರ್ ಟಿ ಓ ಕಚೇರಿಯಿಂದ ಬಿಟ್ಟು ಹೊರಟಿದ್ದೆ. ಅಲ್ಲಿಂದ ಅಂಬಲಪಾಡಿಗೆ ಸಂಬಂಧಿಕರ ಮನೆಗೆ ಹೋಗಿ, ನಂತರ ಕಾರ್ಕಳಕ್ಕೆ ಹೋಗಿದ್ದೆ. ದೂರನ್ನು ನಾನು ಕಾರ್ಕಳದಲ್ಲಿ ಕೊಟ್ಟಿದ್ದೆ.

2) ನಾನು ಎಸಿಬಿ ಕಚೇರಿಗೆ ಬೆಳಗ್ಗಿನ 8 ಗಂಟೆಯ ಒಳಗೆ ಹೋಗಿದ್ದೆ. ಎಸಿಬಿ ಕಚೇರಿಗೆ ಮೊಬೈಲ್‌ನ ಸಂಭಾಷಣೆಗಳನ್ನು ಸಿಡಿಗೆ ಹಾಕಿಕೊಂಡು ನಾನೇ ತೆಗೆದುಕೊಡು ಹೋಗಿದ್ದೆ. ಮೊಬೈಲ್ ನ್ನು ಪೊಲೀಸರಿಗೆ ಕೊಡಲು ತೊಂದರೆ ಇದ್ದುದರಿಂದ, ನನ್ನ ವೈಯಕ್ತಿಕ ಮಾಹಿತಿ ಮೊಬೈಲ್ ನಲ್ಲಿ ಇದ್ದುದರಿಂದ ಅದನ್ನು ಕೊಡಲಿಲ್ಲ. ಸಿಡಿಯನ್ನು ನನ್ನ ಅಂಬಲಪಾಡಿಯ ಸಂಬಂಧಿಕನ ಮನೆಯಲ್ಲಿ ಮಾಡಿಕೊಂಡಿದ್ದೆ. ಆ ಸಿಡಿ ನನ್ನ ಸಂಬಂಧಿಕನ ಮನೆಯಲ್ಲಿಯೇ ಇತ್ತು. ಅದಕ್ಕಾಗಿ ಬಳಸಿದ ಲ್ಯಾಪ್ ಟಾಪ್ ನನ್ನ ಲ್ಯಾಪ್ ಟಾಪ್ ಅಲ್ಲ , ಅದು ನನ್ನ ಸಂಬಂಧಿಕನ ಮನೆಯ ಲ್ಯಾಪ್ ಟಾಪ್ ಆಗಿತ್ತು.

3) ನಿಪಿ-1 ನ್ನು ಕಾರ್ಕಳದ ಅಂಗಡಿಯೊಂದರಲ್ಲಿ ಸಿದ್ದ ಮಾಡಿದ್ದೆ. ಕಾರ್ಕಳದಿಂದ ಉಡುಪಿಗೆ ಮೋಟಾರ್ ಸೈಕಲ್ ನಲ್ಲಿ ಬರಲು 1 ವರೆ ಗಂಟೆ ಎಂದರೆ ಸರಿಯಲ್ಲ. ಸಾದಾರಣ 50 ರಿಂದ 55 ನಿಮಿಷಗಳ ಅವಧಿ ಸಾಕು. ನಾನು ಎಸಿಬಿ

ಕಚೇರಿಗೆ ಬಂದಾಗ ಅಲ್ಲಿ ಇಬ್ಬರು ಸಿಬ್ಬಂದಿಗಳು ಇದ್ದರು. ಪಂಚ ಸಾಕ್ಷಿಗಳು ಬಂದಾಗ ಸುಮಾರು 10-15 ಗಂಟೆಯ ಸಮಯ. ಚಾಸಾ-2 ನನ್ನ ಸಂಬಂಧಿ. ಚಾಸಾ -2 ಹಿಂದಿನ ದಿನವೂ ಸಹ ನನ್ನೊಂದಿಗೆ ಬಂದಿದ್ದರು. ಆದಿನ ನಾವು 11-30 ಗಂಟೆಯವರೆಗೆ ಠಾಣೆಯಲ್ಲಿದ್ದೆವು. ಎಸಿಬಿ ಠಾಣೆಯಿಂದ ಮಣಿಪಾಲದ ಕಚೇರಿಗೆ ಹೋಗಲು ಸುಮಾರು ಅರ್ಧ ಗಂಟೆ ಬೇಕು. ಆದಿನ ನಾನು ಎಸಿಬಿ ಕಚೇರಿಯಿಂದ ನಾನು, ಪೊಲೀಸ್ ಸಿಬ್ಬಂದಿ ಮತ್ತು ಜಗದೀಶ್ ಎನ್ನುವವರು ಹೋಗಿದ್ದೆವು. ಮೊದಲು ನಾವು ಹೋದಾಗ ನಮ್ಮ ವಾಹನವನ್ನು ಸುಮಾರು ಆರ್ ಟಿ ಓ ಕಚೇರಿಯಿಂದ ಸುಮಾರು 150 ಮೀಟರ್ ಗಳ ಅಂತರದಲ್ಲಿ ನಿಲ್ಲಿಸಿದ್ದೆವು. ನಾವು ಅಲ್ಲಿಗೆ ಹೋದಾಗ ಜನಸಂದಣಿ ಇತ್ತು.

4) ದಿನಾಂಕ 15-03-2019 ರಂದು ನಾನು ಹೋದಾಗ ಅಲ್ಲಿ ಯಾವುದೇ ಲೆಡ್ಜರ್ ಗೆ ಹೆಸರನ್ನು ದಾಖಲಿಸಿಲ್ಲ. ನನ್ನೊಂದಿಗೆ ಇದ್ದ ವಾಯ್ಸ ರೆಕಾರ್ಡರನ್ನು ನಾವು ವಾಹನದಿಂದ ಇಳಿದ ಕೂಡಲೇ ಆನ್ ಮಾಡಿಕೊಂಡಿದ್ದೆ. ಆದಿನ ರಾತ್ರಿ ಎಸಿಬಿ ಕಚೇರಿಗೆ ನಾನು ಬರಲಿಲ್ಲ. ನಾನು ನನ್ನ ಬಳಿಯಲ್ಲಿದ್ದ ವಾಯ್ಸ ರೆಕಾರ್ಡರ್ ನ್ನು ಮರಳಿಸಿದಾಗ ಸುಮಾರು 3 ಗಂಟೆಯ ಸಮಯ. ಆದಿನ 1 ನೇ ಅರೋಪಿಯ ಬಳಿ ನನ್ನ ಕೆಲಸವಾಗಿದ್ದ ಬಗ್ಗೆ ನಾನು ವಿಚಾರಿಸಿಲ್ಲ. ಆದಿನ ನಾನು ಯಾವುದೇ ಆರ್ ಟಿ ಓ ಅಧಿಕಾರಿಗಳೊಂದಿಗೆ ಮಾತನಾಡಿಲ್ಲ. ವಾಯ್ಸ ರೆಕಾರ್ಡರನ್ನು ಬಿಟ್ಟು ಆದಿನ ಪೊಲೀಸರು ನನಗೆ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ಪೊಲೀಸರು ಆದಿನ ನನಗೆ ವಾಯ್ಸ ರೆಕಾರ್ಡರೊಂದನ್ನು ಬಿಟ್ಟು ಬೇರೆ ಯಾವುದೇ ಕಾಗದ ಪತ್ರಗಳನ್ನು ನೀಡಿಲ್ಲ.

5) ನಾನು ಆದಿನ 2 ನೇ ಅರೋಪಿಯೊಂದಿಗೆ ಯಾವುದೇ ಮಾತನ್ನು ಆಡಿಲ್ಲ. ಆರೋಪಿಯ ಕೋಣೆಯ ಒಳಗೆ ಹೋಗುವ ಮೊದಲು ಆರ್ ಟಿ ಓ ಕಚೇರಿಯ ಆವರಣದಲ್ಲಿ ಎಷ್ಟು ಹೊತ್ತು ಇದ್ದೀರಿ ಎಂದರೆ, 1 ನೇ ಅರೋಪಿಯ ಕೋಣೆಯ ಒಳಗೆ ಹೋಗುವ ಮೊದಲು ವಿಚಾರಿಸಿದಾಗ ಅವರು ಇರಲಿಲ್ಲ ಎಂದು ಹೇಳಿದರು, ಅದಕ್ಕಾಗಿ ನಾನು ಮರಳಿದ್ದೆ. ಆರೋಪಿಯ ಕೋಣೆಗೆ ಹೋಗುವ ಮೊದಲು ಆರ್ ಟಿ ಓ ಕಚೇರಿಯ ಆವರಣದಲ್ಲಿ ಸುಮಾರು 1 ಗಂಟೆ ಅಲ್ಲಿಯೇ ಇದ್ದೆ. ಆದಿನ ನಾನು ಆರೋಪಿಯ ಕಚೇರಿಯಲ್ಲಿ ನನ್ನ ಅರ್ಜಿಗೆ ಸಂಬಂಧಪಟ್ಟಂತೆ ವಿಚಾರಣೆ

ಮಾಡಿಲ್ಲ. ಆದಿನ ನನ್ನೊಂದಿಗೆ ಬಂದಿದ್ದ ಯಾವುದೇ ಪೊಲೀಸ್ ಸಿಬ್ಬಂದಿ ಸಮವಸ್ತ್ರದಲ್ಲಿ ಇರಲಿಲ್ಲ. ಸದರಿ ಪೊಲೀಸರು ಆರ್ ಟಿ ಓ ಕಚೇರಿಯ ಒಳಭಾಗದಲ್ಲಿ ಇದ್ದರು. ನಾನು ಮೊದಲನೇ ಬಾರಿ ಹೋದಾಗ, 1 ನೇ ಆ.ಸ.ನೌಕರರು ಇರದಿದ್ದ ಬಗ್ಗೆ ಪೊಲೀಸರೊಂದಿಗೆ ಸಂಭಾಷಣೆ ಮಾಡಿದ್ದೆ. ಅದಕ್ಕಾಗಿ ನಾನು ಆರ್ ಟಿ ಓ ಕಚೇರಿಯ ಕಂಪೌಂಡ್ ಹೊರಗಡೆ ಬಂದು ಮಾತನಾಡಿದ್ದೆ.

6) ನಿಶಾನೆ ಪಿ-4 ರ 7 ನೇ ಪುಟದಲ್ಲಿಯ ಸಂಬಾಷಣೆಯ 7 ನೇ ಹೇಳಿಕೆ ಮುನ್ನಾನ ಕಡೆಯಿಂದ ತೆಗೆದುಕೊಂಡು ಹೋಗು ಎಂಬುವುದು ತಪ್ಪಾಗಿ, ಮುನ್ನಾನ ಕೈ ಕೊಟ್ಟು ಹೋಗು ಎಂದು ಲಿಪಿಕರಿಸಿದೆ ಎಂದರೆ ಸರಿಯಲ್ಲ. ಸದರಿ ಭಾಗವನ್ನು ನಿಶಾನೆ ಡಿ-3 ಎಂದು ಗುರುತಿಸಿದೆ. (ನಿಶಾನೆ ಪಿ-4 ರ ಒಂದು ಭಾಗ).

7) ನನಗೆ ಈಗ ತೋರಿಸಿದ ನಿಶಾನೆ ಪಿ-4 ರ 8 ನೇ ಪುಟದಲ್ಲಿ ನನಗೆ ಈಗ ತೋರಿಸಿದಂತೆ ನಾನು ಉತ್ತರ ಕೊಟ್ಟಿಲ್ಲ. ಸದರಿ ಭಾಗವನ್ನು ನಿಶಾನೆ ಡಿ-4 ಎಂದು ಗುರುತಿಸಿದೆ. ಸದರಿ ಪುಟದ ಇನ್ನೊಂದು ಸಂಭಾಷಣೆಯನ್ನು ಪಿರ್ಯಾಧಿಯು ನೋಡಿ, 2 ನೇ ಆರೋಪಿ ಹಾಗೆ ಹೇಳಿಲ್ಲ ಎನ್ನುತ್ತಾರೆ. ಸದರಿ ಭಾಗವನ್ನು ನಿಶಾನೆ ಡಿ-5 ಎಂದು ಗುರುತಿಸಿದೆ. ಟ್ರ್ಯಾಪ್ ಆದ ನಂತರ ತನಿಖಾಧಿಕಾರಿ ನನಗೆ ವಾಯ್ಸು ರೆಕಾರ್ಡರ್ ನ್ನು ಕೇಳಿಸಿದ್ದಾರೆ ಮತ್ತು ಅದನ್ನು ಲಿಪಿಕರಿಸಿದ್ದರು. ನನಗೆ ಈಗ ತೋರಿಸಿದ ನಿಪಿ-4 ರ ಪುಟ ಸಂಖ್ಯೆ 9 ರಲ್ಲಿ ಹೇಳಿದಂತೆ 1 ನೇ ಅರೋಪಿ ನನಗೆ ಹಣ ಅಕೌಂಟ್ ಗೆ ಬೀಳುತ್ತದೆ ಎಂಬುದನ್ನು ಹೇಳಿಲ್ಲ. ಈಗ ಸಾಕ್ಷಿಗೆ ತೋರಿಸಿದ ಸದರಿ ಭಾಗವನ್ನು ನಿಶಾನೆ ಡಿ-6 ಎಂದು ಗುರುತಿಸಿದೆ. ನಾನು ಆದಿನ 1 ನೇ ಅರೋಪಿಗೆ ''ಹಾಗಾದರೆ ನಾನು ದುಡ್ಡು ತಗೊಳ್ಳ '' ಎಂದು ಹೇಳಿಲ್ಲ.

8) ನಾನು 1 ನೇ ಅರೋಪಿಯಿಂದ ಬಂದ ನಂತರ ತನಿಖಾಧಿಕಾರಿಗಳ ಬಳಿ 1 ನೇ ಆರೋಪಿ ಹಣ ಬೇಡಾ, ನನ್ನ ಕೆಲಸ ಆಗಿದೆ ಎಂದು ಹೇಳಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಆದಿನ 1 ನೇ ಆರೋಪಿ ನನಗೆ ಪ್ರಮಾಣ ಪತ್ರವನ್ನು ಕೊಟ್ಟು, ಹಣ ಏನೂ ಬೇಡಾ ಎಂದು ಹೇಳಿದ್ದರು ಎಂಬುದನ್ನು ನಾನು ತನಿಖಾಧಿಕಾರಿಗೆ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಅದು ವಾಯ್ಸು ರೆಕಾರ್ಡರ್ ನಲ್ಲಿ ಇದೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ವಾಯ್ಸು ರೆಕಾರ್ಡರ್ ನ್ನು ಕೇಳಿಸಲು ಕೋರಿರುತ್ತಾರೆ. ಅವಕಾಶವನ್ನು ಮುಕ್ತವಾಗಿಟ್ಟಿದೆ.

9) ನಿಪಿ-4 ರಲ್ಲಿ ವಾಯ್ಸು ರೆಕಾರ್ಡರನಲ್ಲಿನ ಎಲ್ಲಾ ಸಂಭಾಷಣೆಗಳನ್ನು ಲಿಪಿಕರಿಸಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ವಾಯ್ಸು ರೆಕಾರ್ಡರನಲ್ಲಿರುವುದನು ತಿರುಚಿ, ಅವರ ತನಿಖೆಗೆ ಅನುಕೂಲವಾಗುವಂತೆ ಸಂಭಾಷಣೆಯನ್ನು ಮಾತ್ರವೇ ಲಿಪಿಕರಿಸಿದ್ದಾರೆ ಎಂದರೆ ಸರಿಯಲ್ಲ.

10) ನಾನು ಅದಿನ ಆರೋಪಿಯ ಕೋಣೆಯ ಒಳಗೆ ಟ್ರ್ಯಾಪ್ ಪೂರ್ವದಲ್ಲಿ ಒಮ್ಮೆ ಮಾತ್ರ ಹೋಗಿದ್ದೆ. ಆಗ ನಾನು 5 ನಿಮಿಷಗಳಿಗಿಂತ ಕಡಿಮೆ ಅವಧಿಯಲ್ಲಿ ಅವರ ಕೋಣೆಯಲ್ಲಿ ಇದ್ದೆ. ಆಗ ನನ್ನೊಂದಿಗೆ ಚಾಸಾ-4 ಇದ್ದರು. ನಿಶಾನೆ ಪಿ-4 ರ ಪಂಚನಾಮೆ ಆಗುವ ಮೊದಲು 1 ನೇ ಆರೋಪಿಯ ಕೋಣೆಯಲ್ಲಿದ್ದ ಸಿಸಿ ಟಿವಿಯ ಬಗ್ಗೆ ಗೊತ್ತು ಎಂದರೆ ಸರಿಯಲ್ಲ. ನಿಶಾನೆ ಪಿ-4 ರ ಪ್ರಕ್ರಿಯೆ ಆಗುವ ಮೊದಲೇ ನನಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನಾನು ಪಡೆದಿದ್ದೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಬಳಿ ನನ್ನ ಕೆಲಸಕ್ಕಾಗಿ ಯಾವುದೇ ಲಂಚದ ಬೇಡಿಕೆ ಇಟ್ಟಿಲ್ಲ ಎಂದರೆ ಸರಿಯಲ್ಲ. 1 ನೇ ಅರೋಪಿ 16 ನೇ ತಾರೀಕಿನಂದು ನನ್ನ ಯಾವುದೇ ಕೆಲಸವನ್ನು ಬಾಕಿ ಇಟ್ಟುಕೊಂಡಿಲ್ಲ ಎಂದರೆ ಸರಿಯಲ್ಲ. ಅದನ್ನು ಲಂಚ ಕೊಡದೇ ಕೊಡುವುದಿಲ್ಲ ಎಂದು ಇಟ್ಟುಕೊಂಡಿದ್ದರು.

11) 16 ನೇ ತಾರೀಕಿನಂದು ನನ್ನ ಮತ್ತು 1 ನೇ ಅರೋಪಿಯ ನಡುವೆ ಸಂಭಾಷಣೆಯಾಗಿಲ್ಲ. ಆದಿನ ನಾನು ಆರ್ ಟಿ ಓ ಕಚೇರಿಯಲ್ಲಿ ಅವರ ಮಹಿಳಾ ಸಿಬ್ಬಂದಿಯೊಂದಿಗೆ ಮಾತನಾಡಿದ್ದೆ. ನಾನು 16 ನೇ ತಾರೀಕಿನಂದು ಆರೋಪಿಯ ಕೋಣೆಯ ಒಳಗೆ 3 ಬಾರಿ ಹೋಗಿ, 1 ನೇ ಆರೋಪಿಯ ಜೊತೆ ಮಾತನಾಡಿ ಬಂದಿದ್ದೆ ಎಂದರೆ ಸರಿಯಲ್ಲ. ನಾನು 1 ನೇ ಬಾರಿ 1 ಗಂಟೆ 28 ನಿಮಿಷಕ್ಕೆ ಒಳ ಹೋಗಿ, 30 ಸೆಕಂಡ್ ಗಳ ನಂತರ ಹೊರ ಬಂದಿದ್ದೆ, 2 ನೇ ಬಾರಿ 2 ಗಂಟೆ 10 ನಿಮಿಷ 48 ಸೆಕೆಂಡ್ ಗೆ ಹೋಗಿ, 2 ಗಂಟೆ 13 ನಿಮಿಷ 29 ಸೆಕೆಂಡ್ ಗೆ ಬಂದಿದ್ದೆ, 3 ನೇ ಬಾರಿ 2 ಗಂಟೆ 18 ನಿಮಿಷ 24 ಸೆಕೆಂಡ್ ಗೆ ಹೋಗಿ, 2 ಗಂಟೆ 21 ನಿಮಿಷ 56 ಸೆಕೆಂಡ್‌ಗೆ ಹೊರ ಬಂದಿದ್ದೆ ಎಂದರೆ ಸರಿಯಲ್ಲ. ಅದಕ್ಕಾಗಿ ವಿಡಿಯೋ ರೆಕಾರ್ಡಿಂಗಳ ದ್ರಶ್ಯಾವಳಿ ಇವೆ ಎಂದರೆ ಗೊತ್ತಿಲ್ಲ.

12) 2 ನೇ ಆರೋಪಿಯನ್ನು ಡಿವಿಆರ್ ನೋಡಿ ಸುಮಾರು 15 ನಿಮಿಷಗಳ ನಂತರ ಅವರನ್ನು ಕರೆತಂದಿತ್ತು. 2 ನೇ ಆರೋಪಿಯ ಕೈಯನ್ನು ತೊಳೆಸಿದ್ದ ಬಗ್ಗೆ ಗೊತ್ತಿಲ್ಲ.

ಈ ಹಂತದಲ್ಲಿ ವಾಯ್ಸು ರೆಕಾರ್ಡರ್ ನ ಸಂಭಾಷಣೆಗಳನ್ನು ಕೇಳಿಸಲು ಅವಕಾಶ ಕೋರಿದ್ದು, ಮತ್ತು ಅದರ ಪ್ರತಿಯನ್ನು ಈಗಾಗಲೇ ಪ್ರತಿರಕ್ಷಣೆಯ ವಕೀಲರು ತಮ್ಮ ನಕಲು ಅರ್ಜಿ ದಿನಾಂಕ 19-01-2024, 7-08-2023 ರಂದು ಸಲ್ಲಿಸಿ, ಮಂಜೂರು ಮಾಡಿಸಿಕೊಂಡು, ತನಿಖಾಧಿಕಾರಿ ಸಲ್ಲಿಸಿದ ಸಿಡಿ ಮತ್ತು ಡಿವಿಆರ್ ಗಳ ನಕಲುಗಳನ್ನು ಸಿಡಿಯಲ್ಲಿ ಪಡೆದಿರುವುದಾಗಿ ಹೇಳಿದ್ದರಿಂದ ದಿನಾಂಕ 16-03-2019 ರ 1 ನೇ ಆರೋಪಿಯ ಕಚೇರಿಯ ಪಿರ್ಯಾಧಿ ಮತ್ತು ಆರೋಪಿತರ ಸಂಭಾಷಣೆಯ ವಾಯ್ಸು ರೆಕಾರ್ಡರ್ ನ ಸಿಡಿ ಇಲ್ಲಿಯವರೆಗೆ ಎಂಒ ಆಗಿರದಿದ್ದರೂ, ನಕಲು ಒದಗಿಸಿದ್ದರಿಂದ, ಅದನ್ನು ತೆಗೆದು ನ್ಯಾಯಾಲಯದಲ್ಲಿ ಕೇಳಿಸಲು ತೆರೆಯಲಾಯಿತು ಮತ್ತು ಅದನ್ನು ಎಂಒ-19 ಎಂದು ಗುರುತಿಸಿದೆ.

13) ನನಗೆ ಈಗ ಕೇಳಿಸಿದ ಸಿಡಿಯಲ್ಲಿಯ ನನ್ನ ಧ್ವನಿಯನ್ನು ಗುರುತಿಸಲಾರೆ. ಸದರಿ ಸಿಡಿಯ 32 ನಿಮಿಷ 36 ಸೆಕೆಂಡ್ ಗಳ ಕಾಲ ಘಟ್ಟದಲ್ಲಿಯ ಸಂಭಾಷಣೆಗಳಲ್ಲಿ ಒಂದು ಧ್ವನಿ ನನ್ನದು. ವಾಯ್ಸು ರೆಕಾರ್ಡರ್ ನ ವೇಳೆ 32 ನಿಮಿಷ 36 ಸೆಕೆಂಡ್ ಗಳ ಸಮಯದಲ್ಲಿ ನಾನು ತನಿಖಾಧಿಕಾರಿಗೆ ಆರೋಪಿ ಹಣ ಬೇಡಾ ಎಂದಿರುವುದಾಗಿ ಮತ್ತು ಪ್ರಮಾಣ ಪತ್ರ ಕೊಟ್ಟಿರುವುದಾಗಿ ಎಂದು ಹೇಳಿದ್ದೇನೆ. ಹಣವನ್ನು ಟೇಬಲ್ ಮೇಲೆ ಇಟ್ಟಿದ್ದೇನೆಂದು, ಹೇಳಿದ್ದೇನೆಂದರೆ ಸರಿಯಲ್ಲ. ಟ್ರ್ಯಾಪ್ ನಂತರ ಹಣವನ್ನು ತೆಗೆದುಕೊಳ್ಳಲು 1 ನೇ ಆರೋಪಿಯ ಕೋಣೆಯಿಂದ ಹೊರಗೆ ಬಂದಾಗ ನಾನು ತನಿಖಾಧಿಕಾರಿಯೊಂದಿಗೆ ಮಾತನಾಡಿದ್ದೆ. ತನಿಖಾಧಿಕಾರಿ 1 ನೇ ಅರೋಪಿಯ ಕೋಣೆಗೆ ಬಂದ ಸುಮಾರು 10 ನಿಮಿಷದ ನಂತರ ಅವರಿಗೆ ವಾಯ್ಸು ರೆಕಾರ್ಡರ್ ನ್ನು ಮರಳಿಸಿದ್ದೆ. ಆ ಸಮಯದಲ್ಲಿ ವಾಯ್ಸು ರೆಕಾರ್ಡರ್ ಆನ್ ಇದ್ದಂತೆ ಅನಿಸುತ್ತದೆ.

14) 2 ನೇ ಅರೋಪಿಯ ಕೈಯನ್ನು ಪೊಲೀಸರು ಒಂದು ಬಾರಿ ಮಾತ್ರವೇ ಕೈ ತೊಳೆಸಿರುವುದು ಗೊತ್ತು. ಆದಿನ ಆರೋಪಿಯ ಕೋಣೆಯಲ್ಲಿ ಯಾವುದೇ ಹಣವನ್ನು ಜಪ್ತು ಮಾಡಿಲ್ಲ ಎಂದರೆ ನಿಜ.

(ಈ ಸಮಯದಲ್ಲಿ ವೇಳೆ 2 ಗಂಟೆ ಆಗಿದ್ದರಿಂದ ಪಾಟೀಸವಾಲು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ